ಶ್ರೀ ಜಿ. ಪುಟ್ಟಸ್ವಾಮಿಗೌಡ.—ರಾಜ್ಯದಲ್ಲಿ ೧೦.೩ ದಶಲಕ್ಷ ಯೂನಿಟ್ಸ್ ವಿದ್ಯುತ್ ಕೊರತೆ ಇದೆ. ಇದನ್ನು ನಿವಾರಿಸುವುದಕ್ಕೆ ಈಗಾಗಲೇ ಸರ್ಕಾರ ಈ ರೀತಿ ಕಾರ್ಯಕ್ರಮವನ್ನು ಹಾಕಿಕೊಂಡಿದೆ.

೧. ಗ್ರಾಮಾಂತರ ಪ್ರದೇಶಗಳಲ್ಲಿ ಬೆಳಿಗ್ಗೆ ೬ ರಿಂದ ೯ ಗಂಟೆಯವರೆಗೆ ಮತ್ತು ಮಧ್ಯಾಹ್ನ ೩ ರಿಂದ ೬ ಗಂಟೆಯವರೆಗೆ ನಿಯಮಿತ ಲೋಡ್ ಷೆಡಿಂಗ್ ಮಾಡುವುದು.

೨. ಬೆಂಗಳೂರು ಸೇರಿದಂತೆ ನಗರ ಪ್ರದೇಶಗಳಲ್ಲಿ ಬೆಳಿಗಿನ ವೇಳೆ ಪೀಕ್‌ಲೋಡ್ ಷೆಡಿಂಗ್ ೪೫ ನಿಮಿಷ ಮತ್ತು ಸಾಯಂಕಾಲ ೪೫ ನಿಮಿಷ ಪೀಕ್‌ಲೋಡ್ ಷೆಡಿಂಗ್ ಮಾಡುವುದು.

೩. ತುರ್ತು ಸಂದರ್ಭಗಳಲ್ಲಿ ಸಮಗ್ರ ಪವರ್ ಸಿಸ್ಟಂ ಅನ್ನು ತಪ್ಪಿಸಲು ಕನಿಷ್ಠ ಅವಧಿಯವರೆಗೆ ಅನಿಯಮಿತ ಲೋಡ್ ಷೆಡ್ಡಿಂಗ್ ಮಾಡಲಾಗುವುದು.

ಇದು ಅನಿವಾರ್ಯ.

೧೨. ಪಿ.ಎಂ.

ಸ್ವಾಮಿ, ಈಗ ಗ್ರಾಮಾಂತರ ಪ್ರದೇಶದಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೆ ಬೆಳಿಗಿನ ಜಾವ ವಿದ್ಯುತ್ ಕಡಿತ ಆಗುತ್ತಾ ಇರುವುದರಿಂದ ಅವರ ವ್ಯಾಸಂಗಕ್ಕೆ ತೊಂದರೆಯಾಗುವುದಿಲ್ಲ ಪಟ್ಟಣಗಳಲ್ಲಿ, ಬೆಂಗಳೂರಂತ ನಗರದಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೆ ಕೇವಲ ೩೦ ನಿಮಿಷಗಳ ಕಾಲ ತೊಂದರೆಯಾಗುತ್ತದೆ. ಇದರಿಂದ ಹೆಚ್ಚು ಅನಾನುಕೂಲ ಆಗುವುದಿಲ್ಲ ಎಂದು ನಾನು ಭಾವನೆ ಮಾಡಿದ್ದೇನೆ. ಇದರ ಬಗ್ಗೆ ಯಾವ ವಿಧಾನಸಭೆಗಳು ಸರ್ಕಾರಕ್ಕಾಗಲಿ, ಬೋರ್ಡಿಗಾಗಲೀ ಬಂದಿಲ್ಲವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದು ಅನಿವಾರ್ಯ. ಇದನ್ನು ಮಾಡದೇಹೋದರೆ ವಿದ್ಯುತ್ ಕೊರತೆ ತುಂಬುವುದಕ್ಕೆ ಕಷ್ಟವಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಮತ್ತೆ ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಇದು ಸರ್ಕಾರಕ್ಕೆ ಗೊತ್ತಿದೆ ಎಂದು ಹೇಳಿ. ಮಾಡುವುದು ಬಿಡುವುದು ನಿಮಗೆ ಸಂಬಂಧಪಟ್ಟಿದ್ದು. ನಾವು ಮಾಡದೇ ಇರುವುದಕ್ಕೆ ಈ ಕಡೆ ಬಂದಿದ್ದೇವೆ. ನೀವೂ ಮಾಡದಿದ್ದರೆ ನೀವೂ ಈ ಕಡೆ ಬರುತ್ತೀರಿ. ನೀವು ಪವರ್ ಕೊಡುವುದಕ್ಕಾಗುವುದಿಲ್ಲ ಎನ್ನುವ ಸಮಯದಲ್ಲಿ ಕೊಡ ಬೇಕಾಗಿಲ್ಲ. ಆದರೆ ಯಾವ ಸಂದರ್ಭದಲ್ಲಿ ಕೊಡುತ್ತೇವೆ ಎಂದು ಹೇಳುತ್ತೀರಿ, ಆ ಸಂದರ್ಭದಲ್ಲಿ ಡಿಸ್ಟರ್ಬೆನ್ಸ್ ಆಗಬಾರದು. ಅದಕ್ಕೆ ಕಾರ್ಯಕ್ರಮ ಹಾಕಿ

ಶ್ರೀ ಎಂ. ಪಿ. ವೆಂಕಟೇಶ್.—ಗ್ರಾಮಾಂತರ ಪ್ರದೇಶದಲ್ಲಿ ತೊಂದರೆಯಾಗುವುದಿಲ್ಲ ಎಂದು...

ಅಧ್ಯಕ್ಷರು.—ಅವರು ಪ್ರಶ್ನೆ ಕೇಳಿರತಕ್ಕದ್ದು ಮಂತ್ರಿಗಳನ್ನು. ನೀವು ಉತ್ತರ ಹೇಳುತ್ತೀರಾ? ಮಂತ್ರಿಗಳು ಹೇಳಲಿ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—೩೦ ನಿಮಿಷಗಳ ಕಾಲ ಮಾತ್ರ ರಾತ್ರಿ ವೇಳೆ ಪಟ್ಟಣಗಳಲ್ಲಿ ವಿದ್ಯಾರ್ಥಿಗಳಿಗೆ ತೊಂದರೆಯಾಗಬಹುದೆಂದು ಹೇಳಿರುವುದನ್ನು ಗಮನಿಸಿದ್ದೇವೆ. ಆದರ ಬಗ್ಗೆ ಪರಿಶೀಲನೆ ಮಾಡುತ್ತೇವೆ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು

ಶ್ರೀ ಕೆ. ಜೆ. ಜಾರ್ಜ್.—ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ೨೨೯ ಪಟ್ಟಿಯ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.